2. ಹರಾಜು ಛಾರೆಸ್ಟ್ ಇಲಾಖಾ ಸರ್ವೇಯರ್ ಸಾಹೇಬರವರ ಮುಂಜಾರಾತಿಗೆ ವಳಪಟ್ಟಿರುತ್ತೆ.

3. ಚಿಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ತೇವಣಿ ಕಟ್ಟತಕ್ಕದ್ದು. ಇದಕ್ಕೆ ತಪ್ಪಿದರೆ ಅವನನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುನರಾ ಹರಾಜು ಮಾಡಲ್ಪಡುವದು; ಆದರೆ, ಅದರಿಂದ ಉಂಟಾಗುವ ಆದಾಯದಲ್ಲಿ ಸದರೀ ಯವನಿಗೆ ಏನೂ ದೊರಿಯಲಾರದು. ಬಾಕಿ ಕೊಡಬೇಕಾದ ಮುಕ್ತಾಲು ಹಿಸ್ಸೆಯನ್ನು ಮೂರು ಸವ್ಮ ಖಿಸ್ತಿನಲ್ಲಿ ಅಂದರೆ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿಮಾಡತಕ್ಕದ್ದು. ಯಾವ ಖಿಸ್ತನ್ನಾಗಲಿ ವಾಯಿದೆಗೆ ಸರಿಯಾಗಿ ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಡುವದಲ್ಲದೆ, ಕಂಟ್ರಾಕ್ಟರು ಕತರಾವಣೆಮಾಡಿ ಜಮಾಯಿಸಿರುವ ಬಿದರುಗಳನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲಾಧೀತು. ಮತ್ತು ಇವನಿಂದ ಬರಬೇಕಾದ ಕಂಟ್ರಾಕ್ಟು ಹಣದ ಬಾಕಿಯನ್ನು ರೆವಿನ್ಯೂ ಕಂದಾಯದಂತೆ ಭಾವಿಸಿ ವಸೂಲ್ಮಾಡಲಾಧೀತು.

ಖಿಸ್ತುಗಳು.			ತಾರೀಖು.
I	..	..	1ನೇ ಮಾರ್ಚ್ 1897ನೇ ಇಸವಿ.
II	..	..	1ನೇ ಸೆಪ್ಟಂಬರ್ 1897ನೇ ಇಸವಿ.
III	..	..	5ನೇ ಜನವರಿ 1998ನೇ ಇಸವಿ.

4. ಹರಾಜು ಮುಂಜಾರ್ಮಾಡಲ್ಪಟ್ಟ ಸಂಗತಿಯನ್ನು ಕಂಟ್ರಾಕ್ಟರಿಗೆ ತಿಳಿಯಪಡಿಸಿದ ಕೂಡ್ಲೆ ಇವನು ಮೇಲ್ತಂಡ ಮತ್ತು ಈ ಕೆಳಗೆ ವಿವರಿಸಲ್ಪಟ್ಟ ಷರತ್ತುಗಳ ಕಂಡು ನಡದು ಕೊಳ್ಳತಕ್ಕಬಗ್ಗೆ ಛಾವಾ ಕಾಗದದಲ್ಲಿ ಬಂದು ಮುಚ್ಚಳಿಕೆಯನ್ನು ಬರದು ಕೊಡತಕ್ಕದ್ದು.

5. ಹರಾಜು ಮಾಡಲ್ಪಡುವ ಪ್ರದೇಶದಲ್ಲಿ ಇರುವ ಬಣ ಬಿದರುಗಳನ್ನೆಲ್ಲಾ ಕಂಟ್ರಾಕ್ಟರು ಕತರಾವಣೆ ಮಾಡಿ ಅಥವಾ ಜೇರು ಸಹಿತ ಕಿತ್ತು ಸಾಗಿಸಿಕೊಂಡು ಹೋಗಬಹುದು, ಆದರೆ ಹಸೀ ಬಿದರ ಗಳನ್ನು ಕಡಿಯುವದರಲ್ಲಿ ಪ್ರತಿ ಯೊಂದು ಪೊದೆಯಲ್ಲಿಯೂ ಎಂಟು ಹಸೀ ಬಿದರುಗಳನ್ನು ಬಿಟ್ಟು ಮಿಕ್ಕವುಗಳನ್ನು ಸಾಧ್ಯವಾದ ಮಟ್ಟಿಗೂ ಭೂ ಮಟ್ಟಕ್ಕೆ ಸರಿಯಾಗಿ ಕಡಿಯತಕ್ಕದ್ದು.

6. ಛಾರೆಸ್ಟ್ ಇಲಾಖೆಯವರು ಮುಂಚಿತವಾಗಿ ಗುರ್ತು ಮಾಡಿಕೊಡುವ 100—200 ಎಕರೆ ವಿಸ್ತೀರ್ಣವುಳ್ಳ ಪ್ರತಿ ಯೊಂದು ಬ್ಲಾಕಿನಲ್ಲಿಯೂ ಬಂದು ಪ್ರದೇಶದಿಂದ ಪ್ರಾರಂಭಮಾಡಿ ಕ್ರಮವಾಗಿ ಕತರಾವಣೆಮಾಡಿಕೊಂಡು ಹೋಗಬೇಕೆ ಹೊರ್ತು ಯಾವ ಕಾರಣದಿಂದಲೇ ಯಾಗಲಿ ಜಂಗಲಿನ ಎಲ್ಲಾ ಪ್ರದೇಶದಲ್ಲಿಯೂ ಏಕಕಾಲದಲ್ಲಿ ಮನಸ್ವೀ ಕತರಾವಣೆ ಮಾಡಕೂಡದು.

7. ಕತರಾವಣೆ ಮಾಡಿದ ಪ್ರದೇಶದಿಂದ ಬಿದರುಗಳನ್ನು ರಫ್ತು ಮಾಡುವದಕ್ಕೆ ಮೊದಲೆ ಪ್ರತಿಯೊಂದು ಗಾಡಿಗೂ ಛಾರೆಸ್ಟ್ ಇಲಾಖೆಯವರಿಂದ ಬಂದು ವೇ ಪರಮಿಟ್ ಪಡಿಯತಕ್ಕದ್ದು. ವೇ ಪರಮಿಟ್ ಇಲ್ಲದ ಭರ್ತಿಗಾಡಿಗಳನ್ನು ಛಾರೆಸ್ಟ್, ಪೋಲೀಸ್ ಅಥವಾ ರೆವಿನ್ಯೂ ನವುಕರರು ತಡೆ ಮಾಡಬಹುದು.

8. ಕಂಟ್ರಾಕ್ಟರಿಗೆ ಇಷ್ಟವಿದ್ದಲ್ಲಿ ವೊಣ ಬಿದರುಗಳಿಂದಲಾಗಲಿ ಅಥವಾ ಅವುಗಳ ಜೇರುಗಳಿಂದಲಾಗಲಿ ಮಳಿಗಾಲದಲ್ಲಿ ಇದ್ದಲು ಸುಡುವದಕ್ಕೆ ಅಪ್ಪಣೆ ಕೊಡಲಾಧೀತು.

9. ಪ್ರತಿಯೊಂದು ಬ್ಲಾಕಿನಲ್ಲಿಯೂ ಕತರಾವಣೆ ಮಾಡುವ ಬಿದರುಗಳನ್ನು ತಲೆಕೊಂಬೆ ಮತ್ತು ರಂಬೆಗಳನ್ನು ಸಹ ಮತ್ತೊಂದು ಬ್ಲಾಕು ಗುರ್ತು ಮಾಡಲ್ಪಡುವದಕ್ಕೆ ತತ್ಪೂರ್ವವೆ ಛಾರೆಸ್ಟಿನಿಂದ ಹೊರಗೆ ಸಾಗಿಸತಕ್ಕದ್ದು. ತಪ್ಪಿದರೆ ಬಿಡಲ್ಪಟ್ಟ ಬಾಬನ್ನು ಸರ್ಕಾರದ ಛಾಯಿದೆ ಮೇಲೆ ನಿಗಾಮಿಟ್ಟು ಡಿಸ್ಟ್ರಿಕ್ಟು ಛಾರೆಸ್ಟ್ ಆಫಿಸರವರಿಗೆ ಯುಕ್ತ ತೋರಿದ ರೀತಿಯಲ್ಲಿ ವಿಲೇವಾರಿ ಮಾಡಲು ಅವರು ಸ್ವತಂತ್ರರಾಗಿರುತ್ತಾರೆ.

ಬಿ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಛಾರೆಸ್ಟು ಆಫಿಸರ್.

ತುಮಕೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 28ನೇ ಅಕ್ಟೋಬರ್ 1896.

ಮೈಸೂರ ಗವರ್ಮೆಂಟ್ ತುಮಕೂರು ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರ್‌ಗಳು, ತಮ್ಮ ತಮ್ಮ ಸೇವಿಂಗ್ಸ್ ಬ್ಯಾಂಕ್ ಪ್ಯಾಸ್ ಬುಕ್ಕುಗಳನ್ನು 1895—96ನೇ ಇಸವಿಯ ಬಡ್ಡಿ ವೊಬಲಗನ್ನು ದಾಖಲ್ಮಾಡುವದಕ್ಕೋಸ್ಕರ ಈ ಆಫೀಸಿಗೆ ಕಳುಹಿಸಿ ಕೊಡಬೇಕಾಗಿ ಕೇಳಿಕೊಳ್ಳಲ್ಪಟ್ಟಿದೆ.

ಟಿ. ವಿಾರಕಮಾಲುರ್ಚೆಟ್ಟಿಯಾರ್,
ಟ್ರೆಜರಿ ಆಫಿಸರ್.

ಛಾರೆಸ್ಟ್ ಡಿಪಾರ್ಟ್‌ಮೆಂಟ್.

ಸ್ ೧೮೯೬ನೇ ಇಸವಿ ನವೆಂಬರು ತಾರೀಖು 8ರಲ್ಲು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು, ಮದ್ದಗಿರಿ ಡಿಪೋಗಳಲ್ಲಿಯೂ, ಗುಬ್ಬಿ ತಾಲ್ಲೂಕು ಚನ್ನಕೆಟ್ಟಪಳ್ಳಿ ನಿಟಗುಂಟ ಪ್ಲಾಂಟೇಷ್ಣಗಳಲ್ಲಿಯೂ, ಕೆಳಗೆ ನಮೂದಿಸಿರತಕ್ಕ ತಾರೀಖಿನ ಮತ್ತು ಸ್ಥಳಗಳಲ್ಲಿ ಸಾಮಾನುಗಳನ್ನು ತುಮಕೂರು ಡಿಸ್ಟ್ರಿಕ್ಟು ಛಾರೆಸ್ಟ್ ಆಫಿಸರವರಿಂದ ಹರಾಜ್ ಮಾಡಲ್ಪಡುತ್ತೆ.

ತುಮಕೂರು ಡಿಪೋ 11ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಮಣ.	ಸೇರು.
		ಅಡಿ.	ಅಂಗುಲ.	ಸೆಂಟ್ಸ್.		
ಜೇನುತುಪ್ಪ ..	..	..	..	..	51	27
ಜೇನು ಮೇಣ ..	..	..	..	..	7	..
ತ್ಯಾಗದ ತೀರುಗಳು ..	171	208	7	6	..	..
ಕ್ಯಾಸರೀನ ತೀರುಗಳು ..	983	1737	3	3	..	..

ಮದ್ದಗಿರಿ ಡಿಪೋ 15ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಮಣ.	ಸೇರು.
		ಅಡಿ.	ಅಂಗುಲ.	ಸೆಂಟ್ಸ್.		
ಜೇನುತುಪ್ಪ ..	..	..	..	..	29	1
ಜೇನು ಮೇಣ ..	..	..	..	..	4	21
ತ್ಯಾಗದ ತೀರುಗಳು ..	299	280	10	3	..	..

ಗುಬ್ಬಿ ತಾಲ್ಲೂಕು ಚನ್ನಸಟ್ಟಹಳ್ಳಿ ನಿಟಗುಂಟ ಪ್ಲಾಂಟೇಷನ್, 21ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಪರಾ.
		ಅಡಿ.	ಅಂಗುಲ.	ಸೆಂಟ್ಸ್.	
ಕ್ಯಾಸರೀನ ತೀರುಗಳು ..	1841	..	..	..	ನಿಂತಿರುವ ವಣ ಮರಗಳು.

ಷರತ್ತುಗಳು.—ಹರಾಜು ಮೊಬಲಗು ಪೂರ್ತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಹರಾಜು ಖೈದಾದ ಕೂಡ್ಲೆ ಕಾಲು ಹಿಸ್ಸೆ ಮೊಬಲಗು ತೇವಣಿ ತರೀಕೆ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ಹರಾಜು ತಾರೀಖು ಲಾಗಾಯತು ಒಂದು ವಾರದ ವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೇ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜುದಾರನ್ನ ಗುರಿಮಾಡಲ್ಪಡುತ್ತೆ. ಸಾವಾನುಗಳನ್ನೆಲ್ಲಾ ಹಣ ಪೂರ್ತಿ ಮಾಡಿದ ತಾರೀಖು ಲಾಗಾಯತು 5 ದಿವಸಗಳೊಳಗಾಗಿ ಸಾಗಿಸಿಕೊಳ್ಳಬೇಕು. ಪ್ಲಾಂಟೇಷನ್‌ಗಳಲ್ಲಿ ವಣಗಿ ನಿಂತಿರುವ ಕ್ಯಾಸರೀನ ಮರಗಳು ಗುರ್ತು ಮಾಡಿ ನಂಬರು ಹಾಕಲ್ಪಟ್ಟಿರುತ್ತವೆ. ಖರೀದಿದಾರನು ಗುರ್ತು ಮಾಡಿರುವ ವಣ ಮರಗಳನ್ನ ಮಾತ್ರವೇ ಕಡಿದು 1896ನೇ ಇಸವಿ ಡಿಸೆಂಬರ್ ಆಖೈರ್ ವಳಗಾಗಿ ಸದರೀ ಮರಗಳನ್ನ ಪ್ಲಾಂಟೇಷನ್‌ಗಳ ಹದ್ದು ಬಸ್ತು ಹೊರಭಾಗದಲ್ಲಿರುವ ಫ್ಯೆರ್‌ಲೈನ್ ಪ್ರದೇಶಕ್ಕೆ ಸಾಗಿಸಬೇಕು. ತರುವಾಯು ಆ ಮರಗಳು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಅಜವಾಯಿಷಿ ಆದ ನಂತರ ಅವಶ್ಯಕವಾದ ರಹದಾರಿ ನಿಶಿ 1897ನೇ ಇಸವಿ ಜನವರಿ 15ರ ವಳಗಾಗಿ ಸಾಗಿಸಬೇಕು. ಖರೀದಿದಾರನಾಗಲಿ ಅಥವಾ ಅವನ ಕಡೆ ಜನಗಳಾಗಲಿ ಯಾವ ವಿಧವಾದ ಅಕ್ರಮ ನಡಸಿದ್ದೇ ಆದರೆ ಖರೀದಿಗೆ ಪಡದುಕೊಂಡಿರತಕ್ಕ ಮರಗಳನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ 1878ನೇ ಇಸವಿ ಮೈಸೂರ್ ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನ್ ಪ್ರಕಾರ ಕ್ರಿಮಿನಲ್ ಶಿಕ್ಷೆಗೆ ಖರೀದಿದಾರನ್ನ ಗುರಿಮಾಡಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.